8

# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಡಿ\261\2016\ಸನಿಕಾಸ-1

ಬಹುಮಹಡಿಗಳ ಕಟ್ಟಡ,
ಡಾ||ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:20/11/2017

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

ವಿಷಯ: ದೂರುದಾರರಾದ ಶ್ರೀ.ಹೆಚ್.ಆರ್.ನಾಗಭೂಷಣ ಬಿನ್ ಹೆಚ್.ಎನ್.ರಾಮಯ್ಯ, ಹಂದ್ರಾಳು, ದೊಡ್ಡ ಹೊಸಹಳ್ಳಿ ಹೋಬಳಿ, ಮಧುಗಿರಿ ತಾಲ್ಲೂಕ್, ತುಮಕೂರು ಜಿಲ್ಲೆ ರವರ ದೂರನ್ನು ಪರಿಹರಿಸುವ ಬಗ್ಗೆ.

**********

ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕ್ ದೊಡ್ಡಹೊಸಹಳ್ಳಿ ಹೋಬಳಿ ಹಂದ್ರಾಳು ನಿವಾಸಿಯಾದ ಶ್ರೀ.ಹೆಚ್.ಆರ್.ನಾಗಭೂಷಣ ಬಿನ್ ಹೆಚ್.ಎನ್.ರಾಮಯ್ಯ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕ್ 1)ಉಪವಿಭಾಗಾಧಿಕಾರಿಗಳಾಗಿದ್ದ ಶ್ರೀಮತಿ.ಅನಿತಾಲಕ್ಷ್ಮಿ, 2) ತಾಲ್ಲೂಕ್ ಪಂಚಾಯತ್ ಕಾರ್ಯನಿರ್ವಹಣಾಧಿಕಾರಿ ಶ್ರೀ.ಮಹಾಲಿಂಗಯ್ಯ, 3)ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿದ್ದ ಶ್ರೀ.ಶಿವರುದ್ರಪ್ಪ (ಪ್ರಸ್ತುತ ತಾಲ್ಲೂಕ್ ಪಂಚಾಯತ್ ಕಛೇರಿ), ಬ್ಯಾಲ್ಯಾ ಗ್ರಾಮ ಪಂಚಾಯತ್‌ನ 4) ಪಂಚಾಯತ್ ಅಭಿವೃದ್ಧಿ ಅಧಿಕಾರಿ ಶ್ರೀ.ಸಿ.ಆರ್.ಉಮೇಶ್ ಮತ್ತು 5)ಕಾರ್ಯದರ್ಶಿ ಶ್ರೀ.ಬೋರಣ್ಣ, [ಇನ್ನು ಮುಂದೆ "1 ರಿಂದ 5ನೇ ಎದುರುದಾರರು" ಎಂದು ಕ್ರಮವಾಗಿ, ಕರೆಯಲ್ಪಡುತ್ತಾರೆ) ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-** ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕ್ ಬ್ಯಾಲ್ಯಾ ಗ್ರಾಮ ಪಂಚಾಯತ್ ವ್ಯಾಪ್ತಿಯ ಹನುಮಂತಪುರ ಗ್ರಾಮದ ಸಾರ್ವಜನಿಕ ರುದ್ರಭೂಮಿಗೆ ಹಾಗೂ ಬ್ಯಾಲ್ಯಾ ಗ್ರಾಮದ ದಲಿತರ ರುದ್ರಭೂಮಿಗಳಿಗೆ ಹದ್ದುಬಸ್ತು ಮತ್ತು ಮೂಲಭೂತ ಸೌಕರ್ಯಗಳನ್ನು

ಕಲ್ಪಿಸಿಕೊಡಲು ಎದುರುದಾರರು ವಿನಾಕಾರಣ ಉದಾಸೀನ ಮತ್ತು ವಿಳಂಬ ಮಾಡಿದ್ದಾರೆಂದು ಹೇಳಿದ್ದಾರೆ.

3. ದೂರಿನ ಬಗ್ಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ–

ಸದರಿ ದೂರಿಗೆ ಸಂಬಂಧಪಟ್ಟಂತೆ ಬ್ಯಾಲ್ಯಾ ಗ್ರಾಮ ಪಂಚಾಯತ್‌ನ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ದಿನಾಂಕ:23/03/16ರಂದು ನೋಟೀಸ್ ನೀಡಿ, ತುರ್ತು ಕಾಮಗಾರಿ ಪೂರ್ಣಗೊಳಿಸಿ ವರದಿ ಸಲ್ಲಿಸಲು ಸೂಚಿಸಿದ್ದು, ಅದರಂತೆ ಸದರಿ ಸ್ಮಶಾಣದ ಸುತ್ತಲೂ ಸರ್ವೆ ಮಾಡಿ, ಬೇಲಿ ಹಾಕಿಸುವ ಬಗ್ಗೆ ವರದಿ ಕೋರಿದ್ದು, ಈ ಬಗ್ಗೆ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಕಾಮಗಾರಿ ಪ್ರಗತಿಯಲ್ಲಿದ್ದು, ಉಳಿದ ಕಾಮಗಾರಿಯನ್ನು ಅನುದಾನ ಲಭ್ಯವಾದ ನಂತರ, ಆಧ್ಯತೆ ಮೇರೆಗೆ ಪೂರ್ಣಗೊಳಿಸುವುದಾಗಿ ಹೇಳಿದ್ದಾರೆ.

4. ಎರಡರಿಂದ 5ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ಸದರಿ ರುದ್ರಭೂಮಿಗಾಗಿ ಸಂಬಂಧಪಟ್ಟಂತೆ, ಮೂಲಭೂತ ಸೌಕರ್ಯ ಕಲ್ಪಿಸುವ ಉದ್ದೇಶದಿಂದ 2015–16ನೇ ಸಾಲಿನಲ್ಲಿ ನರೇಗಾ ಯೋಜನೆ ಅಡಿ ಕಾಮಗಾರಿ ಪ್ರಾರಂಭಿಸಿದ್ದು, ಸದರಿ ಕಾಮಗಾರಿಗಳು ಪ್ರಗತಿಯ ಹಂತದಲ್ಲಿವೆಯೆಂದು ಹೇಳಿದ್ದಾರೆ.

5. ಎದುರುದಾರರ ಆಕ್ಷೇಪಣೆಗಳಿಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ, ಆಕ್ಷೇಪಣೆಯ ಅಂಶಗಳನ್ನು ಅಲ್ಲಗಳೆದಿದ್ದಾರೆ.

6. ದೂರಿನ ಬಗ್ಗೆ ತನಿಖೆ ಕೈಗೊಂಡು ವರದಿ ಸಲ್ಲಿಸುವಂತೆ ಕರ್ನಾಟಕ ಲೋಕಾಯುಕ್ತ ಆರಕ್ಷಕ ಅಧೀಕ್ಷಕರು, ತುಮಕೂರು ರವರನ್ನು ಕೇಳಲಾಗಿ, ಆರಕ್ಷಕ ಉಪಾಧೀಕ್ಷಕರು, ತುಮಕೂರು (ಇನ್ನು ಮುಂದೆ, 'ತನಿಖಾಧಿಕಾರಿಗಳು' ಎಂದು ಕರೆಯಲ್ಪಡುತ್ತಾರೆ) ರವರು ತಮ್ಮ ತನಿಖಾ ವರದಿಯಲ್ಲಿ –

ಬ್ಯಾಲ್ಯಾ ಗ್ರಾಮದ ಸರ್ವೆ ನಂ.97ರಲ್ಲಿ 1 ಎಕರೆ 20 ಗುಂಟೆ ಜಮೀನನ್ನು ಸಾರ್ವಜನಿಕ ರುದ್ರಭೂಮಿಗಾಗಿ ಹಾಗೂ 1 ಎಕರೆ ಜಮೀನನ್ನು ಪರಿಶಿಷ್ಟ ಜಾತಿ ಜನಾಂಗದ ರುದ್ರಭೂಮಿಗಾಗಿ ಮಂಜೂರಾಗಿದ್ದು, ಸದರಿ ರುದ್ರಭೂಮಿಯಲ್ಲಿ ಕಾಮಗಾರಿ ನಿರ್ವಹಿಸಿರುವ ಬಗ್ಗೆ ಎಂಬಿ ಪುಸ್ತಕದಲ್ಲಿ ನಮೂದಿಸಿದ್ದು, ಸದರಿ ಕಾಮಗಾರಿಗೆ 2015–16ನೇ ಸಾಲಿನಲ್ಲಿ ನರೇಗಾ ಯೋಜನೆ ಅಡಿ ₹2,50,000/– ಮಂಜೂರಾಗಿದೆ. ಆದರೆ, ಸದರಿ ಕಾಮಗಾರಿ ಪೂರ್ಣಗೊಂಡಿಲ್ಲ. ನಿರ್ವಹಿಸಲಾದ ಕಾಮಗಾರಿಯು

6

ಸಹ ಕಳಪೆ ಗುಣಮಟ್ಟದಿಂದ ಕೂಡಿದೆ. ಸದರಿ ಸ್ಮಶಾಣಗಳಲ್ಲಿ ನೀರಿನ ತೊಟ್ಟಿಯನ್ನು ನಿರ್ಮಿಸಿದ್ದು, ಅದು ನೀರಿಲ್ಲದೆ ಬಿರುಕು ಬಿಟ್ಟಿದ್ದು, 2 ದಿನಗಳ ಹಿಂದೆ ಪ್ಯಾಚ್ ವರ್ಕ್ ಮಾಡಲಾಗಿದೆ. ಸದರಿ ಕಾಮಗಾರಿಗಳಿಗೆ 94 ಜನ ಕೂಲಿ ಕಾರ್ಮಿಕರು ಕೆಲಸ ನಿರ್ವಹಿಸಿದ್ದು, ₹21,056/-ನ್ನು ಕೂಲಿ ಮೊತ್ತವಾಗಿ ನೀಡಲಾಗಿದೆ. ಅದೇ ರೀತಿ, 23 ಜನರಿಂದ 7 ದಿನ ಕೆಲಸ ನಿರ್ವಹಿಸಿ ₹36,064/-ನ್ನು ಕೂಲಿ ಹಣವಾಗಿ ನೀಡಲಾಗಿದೆ. ಆದರೆ, ಸದರಿ ಕಾಮಗಾರಿಗಳು ಅಸ್ಪಷ್ಟದಿಂದ ಕೂಡಿವೆ. ಸದರಿ ರುದ್ರಭೂಮಿಗೆ ಸಂಬಂಧಪಟ್ಟಂತೆ ತುಮಕೂರು ಜಿಲ್ಲಾಧಿಕಾರಿಗಳ ಆದೇಶ ಸಂಖ್ಯೆ:ಡಿವಿಎಸ್(2)ಸಿಆರ್ 110\11-12 ದಿನಾಂಕ:21/01/15ರ ಆದೇಶದಂತೆ ರಾಜ್ಯದ ನಗರ ಮತ್ತು ಗ್ರಾಮಾಂತರ ಪ್ರದೇಶದಲ್ಲಿ ಇರುವ ರುದ್ರಭೂಮಿಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಅಭಿವೃದ್ಧಿಪಡಿಸುವ ಸಲುವಾಗಿ ₹1,52,70,000/- ಉಳಿತಾಯ ಖಾತೆಯಲ್ಲಿದ್ದು, ಆ ಹಣವನ್ನು 1ನೇ ಎದುರುದಾರರಿಗೆ ಕಳುಹಿಸಿದ್ದರೂ ಸಹ ಸಾರ್ವಜನಿಕರೊಂದಿಗೆ ಸರಿಯಾದ ರೀತಿ ಸ್ಪಂದಿಸದೇ ಉದಾಸೀನ ತೋರಿದ್ದಾರೆ. ಅದೇ ರೀತಿ, ಸದರಿ ಕಾಮಗಾರಿಗಳ ನಿರ್ವಹಣೆಯಲ್ಲಿ 2 ಮತ್ತು 4ನೇ ಎದುರುದಾರರು ಸಹ ಕರ್ತವ್ಯ ಲೋಪ ಎಸಗಿರುವುದು ಕಂಡು ಬಂದಿದೆ. ಅದೇ ರೀತಿ, ತಾಂತ್ರಿಕ ಸಹಾಯಕರಾದ ಶ್ರೀ.ಡಿ.ರಮೇಶಯ್ಯ ಮತ್ತು ಶ್ರೀ.ಗೌತಮ್ ಹಾಗೂ ಬ್ಯಾಲ್ಯಾ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾದ ಶ್ರೀ.ಗೋಪಾಲಕೃಷ್ಣ ರವರುಗಳು ಜವಾಬ್ದಾರರಾಗಿರುತ್ತಾರೆಂದು ಹೇಳಿದ್ದಾರೆ

7. ತಾಂತ್ರಿಕ ಸಹಾಯಕರಾದ ಶ್ರೀ.ಡಿ.ರಮೇಶಯ್ಯ ಮತ್ತು ಶ್ರೀ.ಗೌತಮ್ ಹಾಗೂ ಬ್ಯಾಲ್ಯಾ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾದ ಶ್ರೀ.ಗೋಪಾಲಕೃಷ್ಣ ರವರುಗಳನ್ನು 6 ರಿಂದ 8ನೇ ಎದುರುದಾರರಾಗಿ ಮುಖಪುಟದಲ್ಲಿ ಸೇರಿಸಿ, ಸದರಿ 1 ರಿಂದ 8ನೇ ಎದುರುದಾರರುಗಳಿಂದ ತನಿಖಾಧಿಕಾರಿಗಳ ವರದಿಗೆ ಉತ್ತರವನ್ನು ಕೇಳಲಾಗಿ, 1ನೇ ಎದುರುದಾರರು ತಮ್ಮ ಉತ್ತರದಲ್ಲಿ -

ದಿನಾಂಕ:25/01/15ರಂದು ಸದರಿ ಗ್ರಾಮ ಪಂಚಾಯಿತಿಯ ಅಧಿಕಾರಿಗಳಿಗೆ ಸದರಿ ಸ್ಮಶಾಣಗಳ ಅಭಿವೃದ್ಧಿಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಪತ್ರ ವ್ಯವಹಾರ ಮಾಡಿದೆ. ಅಲ್ಲದೇ, ದಿ:20/01/16ರಂದು ಕಾರ್ಯನಿರ್ವಹಣಾಧಿಕಾರಿ, ತಾಲ್ಲೂಕ್ ಪಂಚಾಯತ್, ಮಧುಗಿರಿ ರವರಿಗೆ ಸದರಿ ಸ್ಮಶಾಣವನ್ನು ಅಭಿವೃದ್ಧಿಪಡಿಸಿ ವರದಿ ನೀಡುವಂತೆ ನಿರ್ದೇಶನ ನೀಡಿದೆ. ಸದರಿ ಸ್ಮಶಾಣಗಳ ಅಭಿವೃದ್ಧಿ ಕಾರ್ಯವು ತಾಲ್ಲೂಕ್ ಪಂಚಾಯತ್ ವ್ಯಾಪ್ತಿಗೆ ಬರುತ್ತಿದ್ದು, ಅವುಗಳಿಗೆ ಸಂಬಂಧಪಟ್ಟಂತೆ ಮಂಜೂರು ಮಾಡುವ ಅಧಿಕಾರ ಜಿಲ್ಲಾಧಿಕಾರಿಗಳಿಗೆ ಮಾತ್ರವಿದ್ದು, ಮಂಜೂರು ಮಾಡುವಂತೆ ಶಿಫಾರಸ್ಸು ಮಾಡುವ ಅಧಿಕಾರ ತಮಗಿದೆ. ಬ್ಯಾಲ್ಯಾ ಗ್ರಾಮದ ಸರ್ವೆ ನಂ.97ರಲ್ಲಿ ಸ್ಮಶಾಣ ಮಂಜೂರು ಮಾಡುವ ಬಗ್ಗೆ ಜಿಲ್ಲಾಧಿಕಾರಿಯವರಿಗೆ ಶಿಫಾರಸ್ಸು ಮಾಡಿದೆ. ಸರ್ಕಾರಿ ಸುತ್ತೋಲೆಯಂತೆ ತಾಲ್ಲೂಕ್ ಮತ್ತು ಹೋಬಳಿಯಲ್ಲಿರುವ ಸ್ಮಶಾಣಗಳ ಅಭಿವೃದ್ಧಿಗೆ ಆದ್ಯತೆ ನೀಡಿ, ಹೋಬಳಿ ಮಟ್ಟದ ಗ್ರಾಮಗಳ ಸ್ಮಶಾಣ ಅಭಿವೃದ್ಧಿಗೆ ಕ್ರಮ ಕೈಗೊಳ್ಳುವ ಬಗ್ಗೆ ಸರ್ಕಾರದಿಂದ ಹಣ ಮಂಜೂರಾಗಿದೆ. ಬ್ಯಾಲ್ಯಾ ಗ್ರಾಮ ಹೋಬಳಿ ಕೇಂದ್ರವಾಗಿಲ್ಲ. ಆದರೂ ಸಹ ಎಂಜಿಎನ್ಆರ್ಇಜಿಎ ಯೋಜನೆ ಅಡಿ ಸದರಿ ಸ್ಮಶಾಣಗಳನ್ನು ಅಭಿವೃದ್ಧಿಪಡಿಸುವಂತೆ ತಾಲ್ಲೂಕ್ ಪಂಚಾಯತ್ ಕಾರ್ಯನಿರ್ವಹಣಾಧಿಕಾರಿ ಮತ್ತು

ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ನಿರ್ದೇಶನ ನೀಡಿದೆ. ತನಿಖಾಧಿಕಾರಿಗಳು ತಮ್ಮ ವರದಿಯಲ್ಲಿ, ರಾಜ್ಯದ ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿರುವ ರುದ್ರಭೂಮಿಗಳಲ್ಲಿ ಮೂಲಭೂತ ಸೌಲಭ್ಯ ಅಭಿವೃದ್ಧಿಪಡಿಸುವ ಸಲುವಾಗಿ ಅನುದಾನ ₹1,52,70,000/- ಉಳಿತಾಯ ಖಾತೆಯಲ್ಲಿರುವ ಬಗ್ಗೆ ಹೇಳಿದ್ದಾರೆ, ಆದರೆ ಸದರಿ ಅನುದಾನವನ್ನು ಉಪಯೋಗಿಸಿಕೊಳ್ಳುವ ಅನುದಾನ ತಮ್ಮ ವ್ಯಾಪ್ತಿಗೆ ಬರುವುದಿಲ್ಲ. ತಮ್ಮ ತಾಲ್ಲೂಕಿಗೆ ಸಂಬಂಧಪಟ್ಟಂತೆ ಸುಮಾರು 200 ಸ್ಮಶಾಣಗಳಿಗೆ ಜಮೀನು ಮಂಜೂರಾತಿ ಕೋರಿ ಜಿಲ್ಲಾಧಿಕಾರಿಯವರಿಗೆ ಶಿಫಾರಸ್ಸು ಮಾಡಿದೆ. ಕೊಡಿಗೇಹಳ್ಳಿ ಗ್ರಾಮದ ಸ್ಮಶಾಣ ಅಭಿವೃದ್ಧಿಗಾಗಿ ₹25 ಲಕ್ಷ ಜಿಲ್ಲಾಧಿಕಾರಿಯವರಿಂದ ಮಂಜೂರಾಗಿದ್ದು, ಸದರಿ ಸ್ಮಶಾಣ ಅಭಿವೃದ್ಧಿಯಾಗಿದೆ. ಆದರೆ, ಬ್ಯಾಲ್ಯಾ ಗ್ರಾಮದ ಸ್ಮಶಾಣಕ್ಕೆ ಯಾವುದೇ ಅನುದಾನ ಮಂಜೂರಾಗಿಲ್ಲ. ತನಿಖಾಧಿಕಾರಿಗಳು ಸರಿಯಾದ ರೀತಿ ತನಿಖೆ ಮಾಡದೇ ಸುಳ್ಳು ವರದಿ ನೀಡಿರುವುದಾಗಿ ಹೇಳಿದ್ದಾರೆ.

8. ಎರಡು (2) ಮತ್ತು 4ನೇ ಎದುರುದಾರರು ತಮ್ಮ ಉತ್ತರಗಳಲ್ಲಿ –

ಬ್ಯಾಲ್ಯಾ ಗ್ರಾಮ ಪಂಚಾಯತ್‌ಗೆ ಸೇರಿದ ಹನುಮಂತಪುರ ಗ್ರಾಮದ ಸರ್ವೆ ನಂ.96ರಲ್ಲಿ 1 ಎಕರೆ 25 ಗುಂಟೆ ಜಮೀನು ಬ್ಯಾಲ್ಯಾ ಗ್ರಾಮದ ಸರ್ವೆ ನಂ.97ರಲ್ಲಿ 1 ಎಕರೆ ಜಮೀನನ್ನು ರುದ್ರಭೂಮಿಗೆ ಕಾಯ್ದಿರಿಸಿದ್ದು, ಅದೇ ರೀತಿ ತಹಶೀಲ್ದಾರ್, ಮಧುಗಿರಿ ರವರು ಸದರಿ ಜಮೀನಿನ ಹದ್ದುಬಸ್ತು ಗುರುತಿಸಿ ಮಾಡಿಸಿಕೊಟ್ಟ ಮೇರೆಗೆ 2015–16ನೇ ಸಾಲಿನ ಎಂಜಿಎನ್‌ಆರ್‌ಇಜಿಎ ಯೋಜನೆ ಅಡಿ ರುದ್ರಭೂಮಿ ಅಭಿವೃದ್ಧಿಪಡಿಸಲು ಮತ್ತು ಸಾರ್ವಜನಿಕರ ಅನುಕೂಲಕ್ಕಾಗಿ ಮೂಲಭೂತ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲು ಕ್ರಮವಹಿಸಲಾಗಿದ್ದು, ಸದರಿ ಕಾಮಗಾರಿ ಸುಗಮವಾಗಿ ನಡೆಯಲು ಸಹಾಯಕ ನಿರ್ದೇಶಕರು, ತಾಂತ್ರಿಕ ಸಮಾಲೋಚಕರು ಮತ್ತು ತಾಂತ್ರಿಕ ಸಹಾಯಕರು ಅನುಷ್ಟಾನದ ಬಗ್ಗೆ ನೇರ ಜವಾಬ್ದಾರರಾಗಿದ್ದಾರೆ. ಅದೇ ರೀತಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ತಾಂತ್ರಿಕ ಸಮಾಲೋಚಕರು ಮತ್ತು ತಾಂತ್ರಿಕ ಸಹಾಯಕರು, ಎಂಜಿಎನ್‌ಆರ್‌ಇಜಿಎ ಯೋಜನೆ ಅಡಿ ಕೈಗೊಳ್ಳಲಾಗಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಿ, ವರದಿ ನೀಡುವಂತೆ ನೋಟೀಸ್ ನೀಡಿದೆ. ಅಂದಾಜು ಪಟ್ಟಿಯಂತೆ ಸದರಿ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಆದರೆ, ಸದರಿ ಅಂದಾಜು ಪಟ್ಟಿಯಲ್ಲಿ ಸ್ಮಶಾಣ ಜಾಗವನ್ನು ಸಮತಟ್ಟು ಮಾಡುವ ಮತ್ತು ಜಂಗಲ್ ತೆಗೆಯುವ ಕೆಲಸವನ್ನು ಒಳಗೊಂಡಿಲ್ಲ. ಮುಂದಿನ ವರ್ಷದಲ್ಲಿ ದೊರೆಯಬಹುದಾದ ಅನುದಾನದಲ್ಲಿ ಪೂರ್ಣಗೊಳಿಸಲಾಗುವುದು. ಹನುಮಂತಪುರ ಗ್ರಾಮದ ಸ್ಮಶಾಣ ಅಭಿವೃದ್ಧಿ ಕಾಮಗಾರಿ ಪ್ರಗತಿಯಲ್ಲಿದ್ದು, ಸದರಿ ಕಾಮಗಾರಿ ಪೂರ್ಣಗೊಳಿಸಲು ಸ್ಮಶಾಣಕ್ಕೆ ರಸ್ತೆ ಸಂಪರ್ಕ ನಕ್ಷೆಯಲ್ಲಿ ಇಲ್ಲದಿರುವುದರಿಂದ ಮತ್ತು ಸಾರ್ವಜನಿಕರು ತಡೆಯೊಡ್ಡಿರುವುದರಿಂದ ಸಾರ್ವಜನಿಕ ರಸ್ತೆ ಗುರುತಿಸಿಕೊಡುವಂತೆ ಮಧುಗಿರಿ ತಹಶೀಲ್ದಾರ್‌ರವರಿಗೆ ಮನವಿ ಸಲ್ಲಿಸಿದೆಯೆಂದು ಹೇಳಿದ್ದಾರೆ.

9. ಮೂರು (3) ಮತ್ತು 5ನೇ ಎದುರುದಾರರು ತಮ್ಮ ಉತ್ತರಗಳಲ್ಲಿ –

ಸದರಿ ಜಮೀನುಗಳಲ್ಲಿ ಹದ್ದುಬಸ್ತು ಗುರುತಿಸಿಕೊಡುವಂತೆ ಮಧುಗಿರಿ ತಹಶೀಲ್ದಾರ್‌ರವರಿಗೆ ಪತ್ರ ಬರೆದಿದೆ. ತಾವು ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ ಅವಧಿಯಲ್ಲಿ ಸದರಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿಲ್ಲ ಮತ್ತು ಯಾವುದೇ ಬಿಲ್ಲುಗಳನ್ನು ಮಾಡಿಲ್ಲವೆಂದು ಹೇಳಿದ್ದಾರೆ.

10. ಆರನೇ (6ನೇ) ಎದುರುದಾರರು ತಮ್ಮ ಉತ್ತರದಲ್ಲಿ –

ಸದರಿ ಕಾಮಗಾರಿಯನ್ನು ಎಂಜಿಎನ್‌ಆರ್‌ಇಜಿಎ ಯೋಜನೆ ಅಡಿ ನಿರ್ವಹಣೇ ಮಾಡಿದ್ದು, ಬ್ಯಾಲ್ಯಾ ಗ್ರಾಮದ ಸ್ಮಶಾಣ ಕಾಮಗಾರಿ ಮುಕ್ತಾಯಗೊಂಡಿದ್ದು, ಆದರೆ ಅಂದಾಜು ಪಟ್ಟಿಯಲ್ಲಿ ಸ್ಮಶಾಣ ಜಾಗವನ್ನು ಸಮತಟ್ಟು ಮಾಡುವ ಮತ್ತು ಜಂಗಲ್ ತೆಗೆಯುವ ಕಾಮಗಾರಿ ಸೇರಿಲ್ಲ. ಮುಂದಿನ ವರ್ಷದ ಅನುದಾನದಲ್ಲಿ ಕ್ರಮ ವಹಿಸಲಾಗುವುದೆಂದು ಹೇಳಿದ್ದಾರೆ.

11. ಏಳು (7) ಮತ್ತು 8ನೇ ಎದುರುದಾರರು ತಮ್ಮ ಉತ್ತರಗಳಲ್ಲಿ –

ಸದರಿ ಕಾಮಗಾರಿಯನ್ನು ಎಂಜಿಎನ್‌ಆರ್‌ಇಜಿಎ ಯೋಜನೆ ಅಡಿ ನಿರ್ವಹಣೆ ಮಾಡಿದ್ದು, ಬ್ಯಾಲ್ಯಾ ಗ್ರಾಮದ ಸ್ಮಶಾಣ ಕಾಮಗಾರಿ ಮುಕ್ತಾಯಗೊಂಡಿದ್ದು, ಆದರೆ ಅಂದಾಜು ಪಟ್ಟಿಯಲ್ಲಿ ಸ್ಮಶಾಣ ಜಾಗವನ್ನು ಸಮತಟ್ಟು ಮಾಡುವ ಮತ್ತು ಜಂಗಲ್ ತೆಗೆಯುವ ಕಾಮಗಾರಿ ಸೇರಿಲ್ಲ. ಮುಂದಿನ ವರ್ಷದ ಅನುದಾನದಲ್ಲಿ ಕ್ರಮ ವಹಿಸಲಾಗುವುದು, ಹನುಮಂತಪುರ ಗ್ರಾಮದ ಸ್ಮಶಾಣ ಅಭಿವೃದ್ಧಿ ಕಾಮಗಾರಿ ಪ್ರಗತಿಯಲ್ಲಿದ್ದು, ಸದರಿ ಸ್ಮಶಾಣಕ್ಕೆ ರಸ್ತೆ ಸಂಪರ್ಕ ನಕ್ಷೆಯಲ್ಲಿ ಇಲ್ಲದಿರುವುದರಿಂದ, ಸಾರ್ವಜನಿಕರು ಅಡ್ಡಿಪಡಿಸಿದ್ದು, ಈ ಬಗ್ಗೆ ರಸ್ತೆ ಗುರುತಿಸುವಂತೆ ಮಧುಗಿರಿ ತಹಶೀಲ್ದಾರ್ ರವರಿಗೆ ಪತ್ರ ಬರೆದಿದೆ. ಆ ನಂತರ, ಕ್ರಮ ಕೈಗೊಳ್ಳಲಾಗುವುದೆಂದು ಹೇಳಿದ್ದಾರೆ.

12. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

ಬ್ಯಾಲ್ಯಾ ಗ್ರಾಮದ ಸರ್ವೆ ನಂ.97ರಲ್ಲಿ ಸ್ಮಶಾಣ ಅಭಿವೃದ್ಧಿಪಡಿಸುವಂತೆ ಸಾರ್ವಜನಿಕರು 1ನೇ ಎದುರುದಾರರಿಗೆ ವಿಳಾಸ ನಮೂದಿಸಿ, ಗ್ರಾಮ ಪಂಚಾಯತ್‌ಗೆ ಅರ್ಜಿ ಸಲ್ಲಿಸಿರುವುದು ಕಂಡು ಬಂದಿದೆ. ಅದೇ ರೀತಿ, ಸದರಿ ಗ್ರಾಮದ ಸಾರ್ವಜನಿಕರು ಕಾರ್ಯನಿರ್ವಹಣಾಧಿಕಾರಿ, ತಾಲ್ಲೂಕ್ ಪಂಚಾಯತ್ ರವರಿಗೆ ಸದರಿ ಸ್ಮಶಾಣದ ಅಭಿವೃದ್ಧಿಪಡಿಸುವ ಬಗ್ಗೆ ಮನವಿ ಸಲ್ಲಿಸಿರುವುದು ದಾಖಲೆಗಳಿಂದ ಕಂಡು ಬಂದಿದೆ. ಆದರೆ, ಬ್ಯಾಲ್ಯಾ ಗ್ರಾಮದ ಸಾರ್ವಜನಿಕರು ನೇರವಾಗಿ 1ನೇ ಎದುರುದಾರರಿಗೆ ಅರ್ಜಿ ಸಲ್ಲಿಸಿರುವುದು ದಾಖಲೆಗಳಿಂದ ಕಂಡು ಬಂದಿಲ್ಲ. ಆದರೂ ಸಹ 1ನೇ ಎದುರುದಾರರು ದಿ:20/01/16ರಂದು ಸಾರ್ವಜನಿಕರ ಮನವಿಯ ಮೇರೆಗೆ ಕಾರ್ಯನಿರ್ವಹಣಾಧಿಕಾರಿ,

ತಾಲ್ಲೂಕ್ ಪಂಚಾಯತ್, ಮಧುಗಿರಿ ರವರಿಗೆ ನಿರ್ದೇಶನ ನೀಡಿ ಸದರಿ ಸ್ಮಶಾಣವನ್ನು ಒಂದು ವಾರದೊಳಗೆ ಅಭಿವೃದ್ಧಿಪಡಿಸಿ ವರದಿ ನೀಡುವಂತೆ ಪತ್ರ ವ್ಯವಹಾರ ಮಾಡಿರುವುದು ದಾಖಲೆಗಳಿಂದ ಕಂಡು ಬಂದಿದೆ. ಬ್ಯಾಲ್ಯಾ ಗ್ರಾಮ ಪಂಚಾಯತ್ ವ್ಯಾಪ್ತಿಗೆ ಸಂಬಂಧಪಟ್ಟ ಹನುಮಂತಪುರ ಗ್ರಾಮದ ಸರ್ವೆ ನಂ.96ರಲ್ಲಿ 1 ಎಕರೆ 25 ಗುಂಟೆ, ಅದೇ ರೀತಿ ಬ್ಯಾಲ್ಯಾ ಗ್ರಾಮದ ಸರ್ವೆ ನಂ.97ರಲ್ಲಿ 1 ಎಕರೆ ಜಮೀನನ್ನು ರುದ್ರಭೂಮಿಗಾಗಿ ಕಾಯ್ದಿರಿಸಿದ್ದು, ಸದರಿ ಜಮೀನಿನಲ್ಲಿ 2015-16ನೇ ಸಾಲಿಗೆ ಸಂಬಂಧಪಟ್ಟಂತೆ ಎಂಜಿಎನ್‌ಆರ್‌ಇಜಿಎ ಯೋಜನೆ ಅಡಿ ಸದರಿ ರುದ್ರಭೂಮಿಯನ್ನು ಅಭಿವೃದ್ಧಿಪಡಿಸಿ, ಸಾರ್ವಜನಿಕರ ಅನುಕೂಲಕ್ಕಾಗಿ ಮೂಲಭೂತ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲು ಗ್ರಾಮ ಪಂಚಾಯತ್ ವತಿಯಿಂದ ಕ್ರಮ ಕೈಗೊಂಡಿದ್ದು, 2ನೇ ಎದುರುದಾರರು ತಾಲ್ಲೂಕ್ ಮಟ್ಟದ ಅನುಷ್ಠಾನ ಅಧಿಕಾರಿಯಾಗಿ ಸದರಿ ಯೋಜನೆಯ ಮೇಲುಸ್ತುವಾರಿ ಮತ್ತು ಪರಿಣಾಮಕಾರಿ ಅನುಷ್ಠಾನಕ್ಕಾಗಿ ಸಹಾಯಕ ನಿರ್ದೇಶಕರು, ತಾಂತ್ರಿಕ ಸಮಾಲೋಚಕರು ಮತ್ತು ತಾಂತ್ರಿಕ ಸಹಾಯಕರನ್ನು ನಿಯೋಜನೆಗೊಳಿಸಿರುವುದು ದಾಖಲೆಗಳಿಂದ ಕಂಡು ಬಂದಿದೆ. ಬ್ಯಾಲ್ಯಾ ಗ್ರಾಮದ ಸ್ಮಶಾಣ ಅಭಿವೃದ್ಧಿಗೆ ಸಂಬಂಧಪಟ್ಟಂತೆ ಎಂಜಿಎನ್‌ಆರ್‌ಇಜಿಎ ಯೋಜನೆ ಅಡಿ ಅಂದಾಜು ಪಟ್ಟಿ ತಯಾರಿಸಿ, ಅನುಷ್ಠಾನಗೊಳಿಸಿರುವುದು ಕಂಡು ಬಂದಿದೆ. ಆದರೆ, ಸದರಿ ಸ್ಮಶಾಣದ ಸಮತಟ್ಟು ಮಾಡುವ ಮತ್ತು ಜಂಗಲ್ ತೆಗೆಯುವ ಕಾಮಗಾರಿ ಅಂದಾಜು ಪಟ್ಟಿಯಲ್ಲಿ ಇರಲಿಲ್ಲವೆಂದು ಹೇಳಿದ್ದಾರೆ. ಸ್ಮಶಾಣ ಅಭಿವೃದ್ಧಿಪಡಿಸುವ ಅಂದಾಜು ಪಟ್ಟಿಯಲ್ಲಿ ಸದರಿ ಕಾಮಗಾರಿಯು ಸಹ ಒಳಗೊಂಡಿದೆ. ಆದರೆ, 2 ರಿಂದ 8ನೇ ಎದುರುದಾರರು ಸದರಿ ಕಾಮಗಾರಿಯ ನಿರ್ವಹಣೆ ಬಗ್ಗೆ ಸೂಕ್ತ ಕ್ರಮ ಕೈಗೊಂಡಿಲ್ಲ. ಅದೇ ರೀತಿ, ಹನುಮಂತಪುರ ಗ್ರಾಮದ ಸ್ಮಶಾಣ ಅಭಿವೃದ್ಧಿಗೆ ಸಂಬಂಧಪಟ್ಟಂತೆ ಕಾಮಗಾರಿ ಪ್ರಗತಿಯಲ್ಲಿದ್ದು, ಆದರೆ ಸದರಿ ಸ್ಮಶಾಣಕ್ಕೆ ರಸ್ತೆ ಸಂಪರ್ಕ ನಕ್ಷೆಯಲ್ಲಿ ಇಲ್ಲದಿರುವುದರಿಂದ, ಈ ಬಗ್ಗೆ ಸಾರ್ವಜನಿಕರಿಂದ ವಿರೋಧ ವ್ಯಕ್ತವಾದ ಕಾರಣ ರಸ್ತೆ ಗುರುತಿಸಿಕೊಡುವಂತೆ ಮಧುಗಿರಿ ತಹಶೀಲ್ದಾರ್‌ರವರಿಗೆ ವರದಿ ಮಾಡಿರುವುದಾಗಿ ಹೇಳಿದ್ದಾರೆ. ಆದರೆ, ಸದರಿ ಕಾಮಗಾರಿ ಪ್ರಗತಿಯಲ್ಲಿರುವ ಬಗ್ಗೆ ಯಾವುದೇ ದಾಖಲೆಗಳಿಲ್ಲ. ಮಧುಗಿರಿ ತಹಶೀಲ್ದಾರ್‌ರವರಿಗೆ ರಸ್ತೆ ಗುರುತಿಸಲು ಮನವಿ ಸಲ್ಲಿಸಿರುವ ಬಗ್ಗೆಯೂ ಸಹ ಯಾವುದೇ ದಾಖಲೆಗಳಿಲ್ಲ. ಬ್ಯಾಲ್ಯಾ ಮತ್ತು ಹನುಮಂತಪುರ ಗ್ರಾಮದ ಸ್ಮಶಾಣ ಅಭಿವೃದ್ಧಿಗೆ ಸಂಬಂಧಪಟ್ಟಂತೆ 2 ರಿಂದ 8ನೇ ಎದುರುದಾರರು ನಿಗಧಿತ ಅವಧಿಯೊಳಗೆ ಸದರಿ ಕಾಮಗಾರಿಗಳ ಪೂರ್ಣಗೊಳಿಸುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳದೇ ವಿಳಂಬಕ್ಕೆ ಅವಕಾಶ ಮಾಡಿ, ಸಾರ್ವಜನಿಕ ಸಂಪರ್ಕ ಕಲ್ಪಿಸಲು ಯಾವುದೇ ಕ್ರಮ ಕೈಗೊಂಡಿಲ್ಲ. ಸದರಿ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ಬ್ಯಾಲ್ಯಾ ಗ್ರಾಮದ ಸಾರ್ವಜನಿಕರು 1ನೇ ಎದುರುದಾರರಿಗೆ ಯಾವುದೇ ಮನವಿ ಸಲ್ಲಿಸದೇ ಇದ್ದು, ಬದಲಾಗಿ 3 ಮತ್ತು 4ನೇ ಎದುರುದಾರರಿಗೆ ಅರ್ಜಿ ಸಲ್ಲಿಸಿರುವುದು ಕಂಡು ಬಂದಿದೆ. ಆದರೆ, 1ನೇ ಎದುರುದಾರರು ತಕ್ಷಣ ಕಾರ್ಯಪ್ರವೃತ್ತರಾಗಿ 2ನೇ ಎದುರುದಾರರಿಗೆ ಪತ್ರ ಬರೆದು ಸದರಿ ಕಾಮಗಾರಿಗಳನ್ನು ಒಂದು ವಾರದೊಳಗೆ ಪೂರ್ಣಗೊಳಿಸಿ ವರದಿ ನೀಡುವಂತೆ ನಿರ್ದೇಶನ ನೀಡಿರುವುದು ಸ್ಪಷ್ಟವಾಗಿ ಕಂಡು ಬಂದಿದೆ. ತನಿಖಾಧಿಕಾರಿಗಳ ವರದಿಯಲ್ಲಿ, ತುಮಕೂರು ಜಿಲ್ಲಾಧಿಕಾರಿಗಳ ಆದೇಶ ಸಂ:ಡಿಪಿಎಸ್ (2) ಸಿಆರ್ 110/2011-12 ದಿ:21/01/15ರ ಆದೇಶದಲ್ಲಿ ರಾಜ್ಯದ ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿರುವ ರುದ್ರಭೂಮಿಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಅಭಿವೃದ್ಧಿಪಡಿಸುವ ಸಲುವಾಗಿ ₹1,52,70,000/- ಉಳಿತಾಯ ಖಾತೆಯಲ್ಲಿ

ಇರುತ್ತದೆಂದು ಹೇಳಿದ್ದಾರೆ. ಆದರೆ, ಸದರಿ ಅನುದಾನವನ್ನು ಸ್ಮಶಾಣಗಳ ಅಭಿವೃದ್ಧಿಪಡಿಸುವ ಸಲುವಾಗಿಯೇ ಬಿಡುಗಡೆಗೊಳಿಸಲಾಗಿದೆ ಎಂಬ ಬಗ್ಗೆ ಯಾವುದೇ ದಾಖಲೆಗಳಿಲ್ಲ. ಸದರಿ ಸುತ್ತೋಲೆಯಂತೆ ₹25 ಲಕ್ಷ ಅನುದಾನವು ಕೊಡಿಗೇಹಳ್ಳಿ ಗ್ರಾಮದ ಸ್ಮಶಾಣದ ಅಭಿವೃದ್ಧಿಗೆ ಬಿಡುಗಡೆಗೊಳಿಸಿರುವುದು ಸದರಿ ಸುತ್ತೋಲೆಯನ್ವಯ ಕಂಡು ಬಂದಿದೆ. ಸರ್ಕಾರದ ಆದೇಶ ಸಂ:ಕಂಇ 115 ಮುಅಬಿ 2013, ಬೆಂಗಳೂರು ದಿನಾಂಕ:22/06/2013ರಲ್ಲಿ ಹಿಂಧು ರುದ್ರಭೂಮಿಗಳ ಅಭಿವೃದ್ಧಿ ನವೀಕರಣದ ಮಾರ್ಗಸೂಚಿಯಲ್ಲಿ ಹಿಂಧು ರುದ್ರಭೂಮಿಗಳ ಚಿತಾಗಾರ ನಿರ್ಮಾಣ ಪ್ರಾರಂಭಿಕ ಹಂತದಲ್ಲಿ ಈ ಯೋಜನೆಯನ್ನು ರಾಜ್ಯದ ಎಲ್ಲಾ ತಾಲ್ಲೂಕ್ ಕೇಂದ್ರ ಹಾಗೂ ಹೋಬಳಿ ಕೇಂದ್ರಗಳಲ್ಲಿ ಜಾರಿಗೊಳಿಸುವುದು ಹಾಗೂ ಕ್ರಮೇಣ ಗ್ರಾಮಾಂತರ ಪ್ರದೇಶಗಳಿಗೆ ವಿಸ್ತರಿಸಲಾಗುವುದೆಂದು ಪರಿಭಾಷಿಸಿದೆ. ಬ್ಯಾಲ್ಯಾ ಹಾಗೂ ಹನುಮಂತಪುರ ರುದ್ರಭೂಮಿಗಳು ಗ್ರಾಮೀಣ ಪ್ರದೇಶದ ರುದ್ರಭೂಮಿಗಳಾಗಿರುವುದರಿಂದ, ಸದರಿ ಅನುದಾನವನ್ನು ಸದರಿ ಕಾಮಗಾರಿಗಳಿಗೆ ಉಪಯೋಗಿಸಲು ಸಾಧ್ಯವಿಲ್ಲ. ಸದರಿ 2 ಸ್ಮಶಾಣಗಳ ಅಭಿವೃದ್ಧಿ ಕಾಮಗಾರಿಯು ಎಂಜಿಎನ್‌ಆರ್‌ಇಜಿಎ ಯೋಜನೆ ಅಡಿ ಈಗಾಗಲೇ ಕ್ರಮ ಕೈಗೊಂಡಿರುವುದರಿಂದ ಮತ್ತು ಸಾರ್ವಜನಿಕರ ಮನವಿಯ ಮೇರೆಗೆ ಸದರಿ ಕಾಮಗಾರಿಗಳನ್ನು ಒಂದು ವಾರದೊಳಗೆ ಪೂರ್ಣಗೊಳಿಸಿ, ವರದಿ ನೀಡುವಂತೆ 1ನೇ ಎದುರುದಾರರು 2ನೇ ಎದುರುದಾರರಿಗೆ ನಿರ್ದೇಶನ ನೀಡಿರುವುದರಿಂದ, 1ನೇ ಎದುರುದಾರರ ಯಾವುದೇ ಕರ್ತವ್ಯ ಲೋಪ ಕಂಡು ಬರುವುದಿಲ್ಲ ಹಾಗೂ ಸರ್ಕಾರದ ಸುತ್ತೋಲೆಯಂತೆ ಸದರಿ ಕಾಮಗಾರಿಗಳ ನಿರ್ವಹಣೆ ಮಾಡಲು ತಾಲ್ಲೂಕ್ ಪಂಚಾಯತ್, ಕಾರ್ಯನಿರ್ವಹಣಾಧಿಕಾರಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ತಾಂತ್ರಿಕ ಸಮಾಲೋಚಕರು ಮತ್ತು ತಾಂತ್ರಿಕ ಸಹಾಯಕರಿಗೆ ಅಧಿಕಾರ ನೀಡಿರುವುದರಿಂದ, ಇದರಲ್ಲಿ 1ನೇ ಎದುರುದಾರರ ಯಾವುದೇ ಕಾರ್ಯವ್ಯಾಪ್ತಿ ಕಂಡು ಬರುವುದಿಲ್ಲ. ಸದರಿ ಕಾಮಗಾರಿಗಳನ್ನು 2 ರಿಂದ 8ನೇ ಎದುರುದಾರರು ಸರ್ಕಾರದಿಂದ ಮಂಜೂರಾಗಿರುವ ಅನುದಾನವನ್ನು ಉಪಯೋಗಿಸಿಕೊಂಡು ಪಂಚಾಯತ್ ವತಿಯಿಂದ ಮಾಡಿಸಿ, ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವಲ್ಲಿ ವಿಫಲರಾಗಿದ್ದು, ನಿಯಮಾನುಸಾರ ಕಾಮಗಾರಿಯನ್ನು ನಿಗಧಿತ ಸಮಯದೊಳಗೆ ಪೂರ್ಣಗೊಳಿಸದೇ ಕಾಮಗಾರಿ ವಿಳಂಬ ಮಾಡಿ, ಸರ್ಕಾರದ ಅನುದಾನವನ್ನು ದುರುಪಯೋಗ ಪಡಿಸಿಕೊಳ್ಳಲು ಕಾರಣಕರ್ತರಾಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ.

13. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಸದರಿ 2 ರಿಂದ 8ನೇ ಎದುರುದಾರರುಗಳ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ಇಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಕ್ರಮ ಕೈಗೊಳ್ಳಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

14. ಆದ್ದರಿಂದ, ಸದರಿ ಎರಡು ಸ್ಮಶಾಣಗಳ ಅಭಿವೃದ್ಧಿಯ ಬಗ್ಗೆ ಕೂಡಲೇ ಕಾನೂನು ರೀತಿ ಸೂಕ್ತ ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(1)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ.

15. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಒಂದು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

(signature) 20/11/17

(ನ್ಯಾಯಾಮೂರ್ತಿ ಸುಬಾಷ್ ಬಿ ಅಡಿ)
ಉಪಲೋಕಾಯುಕ್ತ-2,
ಕರ್ನಾಟಕ ರಾಜ್ಯ.